# All India Radio: Bangalore
# National Bulletin In Kannada
# 26.08.2025  19.35 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><><>**

ಮುಖ್ಯಾಂಶಗಳು

1. ಐಎನ್‌ಎಸ್ ಉದಯಗಿರಿ, ಐಎನ್‌ಎಸ್ ಹಿಮಗಿರಿ ಲೋಕಾರ್ಪಣೆಗೊಳಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್
2. ಎರಡು ದಿನಗಳ ಜಪಾನ್ ಪ್ರವಾಸಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ನಾಡಿದ್ದು ಟೋಕಿಯೋಗೆ ಭೇಟಿ
3. ಗಣೇಶ ಚತುರ್ಥಿಯ ಮುನ್ನಾದಿನವಾದ ಇಂದು ದೇಶದ ನಾಗರಿಕರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಶುಭಾಶಯ
4. ೧೬ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಶಿಪ್ ; ಮಹಿಳೆಯರ ೫೦ ಮೀಟರ್ ರೈಫಲ್ ಸ್ಪರ್ಧೆಯಲ್ಲಿ ಭಾರತದ ಸಿಫ್ಟ್ ಕೌರ್ ಸಮ್ರಾಗೆ ಚಿನ್ನ

<><><><>

ವಿಶಾಖಪಟ್ಟಣದ ಪೂರ್ವ ನೌಕಾ ಕಮಾಂಡ್‌ನಲ್ಲಿ ಇಂದು ಭಾರತೀಯ ನೌಕಾಪಡೆಯ ಎರಡು ಮುಂಚೂಣಿ ಯುದ್ಧ ನೌಕೆಗಳಾದ ಐಎನ್‌ಎಸ್ ಉದಯಗಿರಿ ಮತ್ತು ಐಎನ್‌ಎಸ್ ಹಿಮಗಿರಿಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಲೋಕಾರ್ಪಣೆಗೊಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಭಾರತ ಸರ್ಕಾರ ಕೈಗೊಂಡ 'ಮೇಕ್ ಇನ್ ಇಂಡಿಯಾ' ಮತ್ತು 'ಆತ್ಮ ನಿರ್ಭರ ಭಾರತ' ಉಪಕ್ರಮಗಳ ಯಶಸ್ಸನ್ನು ಇದು ಪ್ರತಿಬಿಂಬಿಸುತ್ತದೆ. ಭಾರತದ ೨ ಪ್ರತಿಷ್ಠಿತ ಹಡಗು ತಂಗುದಾಣಗಳಿಂದ ೨ ಪ್ರಮುಖ ಯುದ್ಧ ನೌಕೆಗಳನ್ನು ಒಂದೇ ಸಮಯದಲ್ಲಿ ನಿಯೋಜಿಸುತ್ತಿರುವುದು ಇದೇ ಮೊದಲು ಎಂದು ಹೇಳಿದರು. ಇದು ಭಾರತದ ವೇಗವರ್ಧಿತ ನೌಕಾ ಆಧುನೀಕರಣ ಮತ್ತು ವಿವಿಧ ಹಡಗು ತಂಗುದಾಣಗಳಿಂದ ಅತ್ಯಾಧುನಿಕ ಯುದ್ಧ ನೌಕೆಗಳನ್ನು ತಲುಪಿಸುವ ಸಾಮರ್ಥ್ಯವನ್ನು ತೋರುತ್ತದೆ ಎಂದು ಅವರು ತಿಳಿಸಿದರು.

**ಧ್ವನಿ : ರಾಜನಾಥ್ ಸಿಂಗ್ (೩೦ ಸೆಕೆಂಡ್ಸ್‌ಗಳು)**

<><><><>

ಗುಜರಾತ್‌ನ ಅಹ್ಮದಾಬಾದ್‌ನ ಹನ್ಸಲ್ಪುರದಲ್ಲಿಂದು ಪ್ರಧಾನಿ ನರೇಂದ್ರ ಮೋದಿ, ಸುಜುಕಿಯ ಮೊದಲ ಜಾಗತಿಕ ಕಾರ್ಯತಂತ್ರದ ಬ್ಯಾಟರಿ ಎಲೆಕ್ಟ್ರಿಕ್ ವಾಹನ 'ಇ ವಿಟಾರಾ' ದ ಉದ್ಘಾಟನೆ ನೆರವೇರಿಸಿ, ಅದರ ರಫ್ತಿಗೆ ಹಸಿರು ನಿಶಾನೆ ತೋರಿದರು. ಭಾರತದಲ್ಲಿ ತಯಾರಾಗುವ ಇ-

ವಾಹನಗಳನ್ನು ಯುರೋಪ್, ಜಪಾನ್ ಸೇರಿದಂತೆ ೧೦೦ಕ್ಕೂ ಹೆಚ್ಚು ರಾಷ್ಟ್ರಗಳಿಗೆ ರಫ್ತು ಮಾಡಲಾಗುವುದು. ಇದರೊಂದಿಗೆ, ಭಾರತವು ಸುಜುಕಿ ಸಂಸ್ಥೆಯ ಎಲೆಕ್ಟ್ರಿಕ್ ವಾಹನಗಳ ಜಾಗತಿಕ ತಯಾರಿಕಾ ಕೇಂದ್ರವಾಗಿ ಹೊರಹೊಮ್ಮಲಿದೆ. ಹೈಬ್ರಿಡ್ ಬ್ಯಾಟರಿ ಎಲೆಕ್ಟ್ರೋಡ್‌ಗಳ ಸ್ಥಳೀಯ ಉತ್ಪಾದನೆಗೆ ಚಾಲನೆ ನೀಡಿದ್ದು, ೧೦೦ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಎಲೆಕ್ಟ್ರಿಕ್ ಬ್ಯಾಟರಿ ವಾಹನಗಳ ರಫ್ತಿಗೆ ಹಸಿರು ನಿಶಾನೆ ತೋರಿದರು. ತೋಶಿಬಾ, ಡೆನ್ಸೊ ಮತ್ತು ಸುಜುಕಿ ಸಹಭಾಗಿತ್ವದ ಹೈಬ್ರಿಡ್ ಬ್ಯಾಟರಿ ಎಲೆಕ್ಟ್ರೋಡ್‌ಗಳ ಉತ್ಪಾದನಾ ಘಟಕ ದೇಶೀಯ ಉತ್ಪಾದನೆ ಮತ್ತು ಶುದ್ಧ ಇಂಧನದಲ್ಲಿ ನಾವೀನ್ಯತೆಗೆ ಬಲ ನೀಡಲಿದೆ. ಆ ಮೂಲಕ ೮೦ ಪ್ರತಿಶತಕ್ಕಿಂತಲೂ ಹೆಚ್ಚಿನ ಬ್ಯಾಟರಿ ಮೌಲ್ಯ ಈಗ ಭಾರತದಲ್ಲೇ ಉತ್ಪಾದನೆಯಾಗಲಿದೆ. ಬಳಿಕ ಹಸಿರು ಸಂಚಾರ ಉಪಕ್ರಮಗಳ ಉದ್ಘಾಟನಾ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ, ಇನ್ನು ಮುಂದೆ ಭಾರತದಲ್ಲಿ ತಯಾರಾಗುವ ವಿದ್ಯುತ್ ಚಾಲಿತ ವಾಹನಗಳು ನೂರು ರಾಷ್ಟ್ರಗಳಿಗೆ ರಫ್ತು ಮಾಡಲಾಗುವುದು. ಹೈಬ್ರಿಡ್ ಬ್ಯಾಟರಿ ಎಲೆಕ್ಟ್ರೋಡ್‌ಗಳ ಸ್ಥಳೀಯ ಉತ್ಪಾದನೆಗೆ ಚಾಲನೆ ನೀಡಲಾಗಿದ್ದು, ಇಂದಿನ ಈ ಎಲ್ಲಾ ಕಾರ್ಯಕ್ರಮಗಳು ಭಾರತ ಮತ್ತು ಜಪಾನದ ಸ್ನೇಹ ಸಂಬಂಧಕ್ಕೆ ಹೊಸ ಆಯಾಮ ನೀಡಿದೆ ಎಂದು ತಿಳಿಸಿದರು.

<><><>

ಪ್ರಧಾನಿ ನರೇಂದ್ರ ಮೋದಿ ನಾಡಿದ್ದು, ಜಪಾನ್‌ಗೆ ಅಧಿಕೃತ ಭೇಟಿ ನೀಡಲಿದ್ದಾರೆ. ಆಗಸ್ಟ್ ೨೯ ಮತ್ತು ೩೦ ರಂದು ಜಪಾನ್ ಪ್ರಧಾನಿ ಶಿಗೇರು ಇಶಿಬಾ ಅವರೊಂದಿಗೆ ೧೫ನೇ ಭಾರತ-ಜಪಾನ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ಕುರಿತು ನವದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾಹಿತಿ ನೀಡಿದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ವಾರ್ಷಿಕ ಶೃಂಗಸಭೆಯು ಉಭಯ ಪ್ರಧಾನಿಗಳಿಗೆ ದ್ವಿಪಕ್ಷೀಯ ಸಂಬಂಧಗಳ ಆಳವಾದ ವಿಮರ್ಶೆ ಮತ್ತು ಪ್ರಗತಿಯನ್ನು ಪರಿಶೀಲಿಸಲು ಅವಕಾಶ ನೀಡುತ್ತದೆ ಎಂದು ಹೇಳಿದರು. ಇದೇ ವೇಳೆ ಉಭಯ ನಾಯಕರು ಪ್ರಾದೇಶಿಕ ಮತ್ತು ಜಾಗತಿಕ ಪ್ರಾಮುಖ್ಯತೆಯ ವಿಷಯಗಳ ಕುರಿತು ಅಭಿಪ್ರಾಯಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲಿದ್ದಾರೆ ಎಂದರು. ೨೦೧೪ರಲ್ಲಿ ಅಧಿಕಾರವಹಿಸಿಕೊಂಡ ನಂತರ ಪ್ರಧಾನಿ ನರೇಂದ್ರ ಮೋದಿ ಅವರು, ಜಪಾನ್‌ಗೆ ಭೇಟಿ ನೀಡುತ್ತಿರುವ ೮ನೇ ಭೇಟಿ ಇದಾಗಿದೆ. ಭಾರತ ಮತ್ತು ಜಪಾನ್ ಹಲವು ವಿಷಯಗಳಲ್ಲಿ ಪರಸ್ಪರ ನಂಬಿಕೆ ಮತ್ತು ಕಾರ್ಯತಂತ್ರದ ದೃಷ್ಟಿಕೋನವನ್ನು ಹಂಚಿಕೊಳ್ಳುತ್ತದೆ ಎಂದು ಅವರು ಹೇಳಿದರು.

<><><>

ಗಣೇಶ ಚತುರ್ಥಿಯ ಮುನ್ನಾದಿನವಾದ ಇಂದು ದೇಶದ ನಾಗರಿಕರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಶುಭಾಶಯ ಕೋರಿದ್ದಾರೆ. ಈ ಹಬ್ಬವನ್ನು ಅತ್ಯಂತ ಭಕ್ತಿ ಮತ್ತು ಉತ್ಸಾಹದಿಂದ ಆಚರಿಸಲಾಗುತ್ತದೆ. ಜ್ಞಾನ ಮತ್ತು ಯೋಗಕ್ಷೇಮದ ಮೂಲವಾಗಿ ಗಣೇಶನನ್ನು ಪೂಜಿಸಲಾಗುತ್ತದೆ. ಜನರು ಹೊಸ ಆರಂಭ ಮತ್ತು ಅಡೆತಡೆಗಳ ನಿವಾರಣೆಗಾಗಿ ಗಣೇಶನ ಆಶೀರ್ವಾದವನ್ನು ಬಯಸುತ್ತಾರೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಈ ಹಬ್ಬವು ಜನರು ಹೊಸ ಗುರಿಗಳು ಮತ್ತು ಸಕಾರಾತ್ಮಕ ಮನೋಭಾವದೊಂದಿಗೆ ಮುಂದುವರೆಯಲು ಪ್ರೇರೇಪಿಸುತ್ತದೆ. ದೇಶದ ಪರಿಸರವನ್ನು ಸಂರಕ್ಷಿಸುವತ್ತ ಈ ಹಬ್ಬವನ್ನು ಆಚರಿಸಲು ಹಾಗೂ ಸ್ವಚ್ಛ ಹಸಿರು ಮತ್ತು ಹೆಚ್ಚು ಸಮೃದ್ಧ ರಾಷ್ಟ್ರವನ್ನು ನಿರ್ಮಿಸಲು ಕೊಡುಗೆ ನೀಡುವಂತೆ ಅವರು ಜನರಿಗೆ ಮನವಿ ಮಾಡಿದರು.

<><><>

ನವದೆಹಲಿಯಲ್ಲಿಂದು ಎರಡು ದಿನಗಳ ಚೈತನ್ಯಶೀಲ ಗ್ರಾಮಗಳು ಯೋಜನೆಯ ಕಾರ್ಯಾಗಾರವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಉದ್ಘಾಟಿಸಿದರು. ಉದ್ಘಾಟನೆ ಅಧಿವೇಶನ ಉದ್ದೇಶಿಸಿ ಮಾತನಾಡಿದ ಸಚಿವರು, ಚೈತನ್ಯಶೀಲ ಗ್ರಾಮ ಯೋಜನೆಯು ಮೂರು ಪ್ರಮುಖ ಅಂಶಗಳನ್ನು ಆಧರಿಸಿದೆ. ಇವು ಗಡಿ ಗ್ರಾಮಗಳಿಂದ ವಲಸೆ ಹೋಗುವುದನ್ನು ತಡೆಯುವುದು, ಗಡಿ ಗ್ರಾಮಗಳ ಪ್ರತಿಯೊಬ್ಬ ನಾಗರಿಕನು ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಶೇಕಡ ೧೦೦ರಷ್ಟು ಪ್ರಯೋಜನಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಗಡಿ ಮತ್ತು ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸಲು ಗ್ರಾಮಗಳನ್ನು ಬಲವಾದ ಸಾಧನಗಳಾಗಿ ಅಭಿವೃದ್ಧಿಪಡಿಸುವುದಾಗಿದೆ ಎಂದು ಹೇಳಿದರು.

<><><>

ದೇಶಾದ್ಯಂತ ಶಿಕ್ಷಣ ನೀಡುವಲ್ಲಿ ಸರ್ಕಾರಿ ಶಾಲೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಒಟ್ಟು ದಾಖಲಾತಿಗಳಲ್ಲಿ ಶೇಕಡ ೫೬ ರಷ್ಟು ದಾಖಲೆಗಳು ಸರ್ಕಾರಿ ಶಾಲೆಗಳದ್ದಾಗಿವೆ. ನಗರ ಪ್ರದೇಶಗಳಲ್ಲಿ ಸುಮಾರು ಶೇಕಡ ೩೦ಕ್ಕೆ ಹೋಲಿಸಿದರೆ, ಶೇಕಡ ೬೬ರಷ್ಟು ವಿದ್ಯಾರ್ಥಿಗಳು ದಾಖಲಾಗಿರುವ ಗ್ರಾಮೀಣ ಪ್ರದೇಶಗಳಲ್ಲಿ ಈ ಸಂಖ್ಯೆ ಹೆಚ್ಚಾಗಿದೆ. 'ಸಮಗ್ರ ಮಾದರಿ ಸಮೀಕ್ಷೆ; ಶಿಕ್ಷಣ ೨೦೨೫' ರ ಪ್ರಕಾರ ದೇಶಾದ್ಯಂತ ದಾಖಲಾತಿಯಲ್ಲಿ ಖಾಸಗಿ ಅನುದಾನರಹಿತ ಮಾನ್ಯತೆ ಪಡೆದ ಶಾಲೆಗಳು ಸುಮಾರು ಶೇಕಡ ೩೨ರಷ್ಟಿವೆ.

<><><>

ನವದೆಹಲಿಯಲ್ಲಿಂದು ಇಂಡಿಯಾ ಪೋಸ್ಟ್ ಮತ್ತು ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್‌ನ ಕಾರ್ಯಕ್ಷಮತೆಯನ್ನು ಕೇಂದ್ರ ಸಂವಹನ ಖಾತೆ ರಾಜ್ಯ ಸಚಿವ ಡಾ. ಚಂದ್ರಶೇಖರ್ ಪೆಮ್ಮಸಾನಿ ಪರಿಶೀಲಿಸಿದರು.

ಡಿಜಿಟಲ್ ಉಪಕ್ರಮಗಳು ಗ್ರಾಹಕರ ಅನುಕೂಲತೆ ಮತ್ತು ದೇಶಾದ್ಯಂತ ಸೇವೆಗಳನ್ನು ಹೆಚ್ಚು ಪ್ರವೇಶಿಸುವ ಮಾರ್ಗಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸಭೆ ಉದ್ದೇಶಿಸಿ ಮಾತನಾಡಿದ ಸಚಿವ ಡಾ. ಚಂದ್ರಶೇಖರ್ ಪೆಮ್ಮಸಾನಿ, ಇಂಡಿಯಾ ಪೋಸ್ಟ್ ಮತ್ತು ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ನಡುವೆ ನಿಕಟ ಸಮನ್ವಯದ ಅಗತ್ಯವಿದೆ.

<><><><>

ಜಿಎಸ್‌ಟಿ ದರಗಳ ಕುರಿತು ಊಹಾಪೋಹಗಳನ್ನು ತಪ್ಪಿಸಲು ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ ಮಂಡಳಿ ಜನರನ್ನು ಒತ್ತಾಯಿಸಿದೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಸಿಬಿಐಸಿ, ಈ ನಿಟ್ಟಿನಲ್ಲಿ ನಿರ್ಧಾರಗಳನ್ನು ಕೇಂದ್ರ ಮತ್ತು ರಾಜ್ಯಗಳನ್ನು ಒಳಗೊಂಡಿರುವ ಜಿಎಸ್‌ಟಿ ಕೌನ್ಸಿಲ್ ಒಟ್ಟಾಗಿ ತೆಗೆದುಕೊಳ್ಳುತ್ತದೆ ಎಂದು ತಿಳಿಸಿದೆ.

ಊಹಾಪೋಹಗಳು, ಆಧಾರರಹಿತ ವದಂತಿಗಳಿಗೆ ಕಾರಣವಾಗುತ್ತವೆ ಮತ್ತು ಮಾರುಕಟ್ಟೆಗಳಲ್ಲಿ ಏರಿಳಿತಕ್ಕೆ ಕಾರಣವಾಗಬಹುದು ಎಂದು ಅದು ಹೇಳಿದೆ.

<><><><>

ಕಜಕಿಸ್ತಾನದ ಶಿಮ್ಕೆಂಟ್‌ನಲ್ಲಿ ಇಂದು ನಡೆದ ೧೬ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಶಿಪ್‌ನ ಮಹಿಳೆಯರ ೫೦ ಮೀಟರ್ ರೈಫಲ್ ಸ್ಪರ್ಧೆಯಲ್ಲಿ ಭಾರತದ ಸಿಫ್ಟ್ ಕೌರ್ ಸಮ್ರಾ ಚಿನ್ನದ ಪದಕ ವಿಜೇತರಾಗಿದ್ದಾರೆ. ೪೫೯.೨ ಅಂಕಗಳಿಸಿ ಕೌರ್ ಅಗ್ರಸ್ಥಾನ ಪಡೆದಿದ್ದಾರೆ. ಅವರ ನಂತರದ ಸ್ಥಾನಗಳಲ್ಲಿ ಕ್ರಮವಾಗಿ ಚೀನಾದ ಯುಜಿ ಯಾಂಗ್ ಮತ್ತು ಜಪಾನ್‌ನ ಮಿಸಾಕಿ ನೊಬಾಟಾ ೨ನೇ ಮತ್ತು ೩ನೇ ಸ್ಥಾನ ಪಡೆದಿದ್ದಾರೆ. ಇದೇ ವೇಳೆ ವೈಯಕ್ತಿಕ ೮ ಶೂಟರ್ ಫೈನಲ್‌ನಲ್ಲಿ ಮತ್ತೊಬ್ಬ ಭಾರತೀಯ ಆಶಿ ಚೌಕ್ಸೆ ೪೦೨.೮ ಅಂಕಗಳೊಂದಿಗೆ ೭ನೇ ಸ್ಥಾನ ಪಡೆದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>